ಪಿರಿಯಾಪಟ್ಟಣದಿಲ್ಲಿ ಕ್ರೀಡಾಂಗಣ ನಿರ್ಮಾಣ

24(239)

ಶ್ರೀ ಹೆಚ್.ಸಿ.ಬಸವರಾಜು (ಪಿರಿಯಾಪಟ್ಟಣ): ಮಾನ್ಯ ಯುವ ಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಪಿರಿಯಾಪಟ್ಟಣದಲ್ಲಿ ಸುಸಜ್ಜಿತವಾದ ಕ್ರೀಡಾಂಗಣ ನಿರ್ಮಾಣಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿ ಅದನ್ನು ಭೂ ಸೇನಾ ನಿಗಮದವರಿಗೆ ವಹಿಸಿಕೊಡಲಾಗಿದ್ದು ಕಾಮಗಾರಿ ಪ್ರಾರಂಭ ಮಾಡದೇ ಇರಲು ಕಾರಣಗಳೇನು?

ಆ) ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುವುದು? ಯಾವಾಗ ಕಾಮಾಗಾರಿ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಕ್ರೀಡಾಂಗಣ ನಿರ್ಮಾಣಕ್ಕೆ ನೀಡಿರುವ ಜಮೀನಿನಲ್ಲಿ ಅತಿಕ್ರಮಣವಾಗಿ ಗುಡಿಸಲುಗಳನ್ನು ನಿರ್ಮಿಸಲಾಗಿದ್ದು, ತಹಸೀಲ್ದಾರ್, ಪಿರಿಯಾಪಟ್ಟಣ ಇವರಿಗೆ ಅತಿಕ್ರಮಣ ತೆರವು ಮಾಡಲು ಕೋರಲಾಗಿದ್ದು, ಇದುವರೆಗೆ ಅತಿಕ್ರಮಣ ತೆರವು ಮಾಡದಿರುವುದರಿಂದ ಕ್ರೀಡಾಂಗಣವನ್ನು ನಿರ್ಮಿಸಲು ಇದುವರೆಏಗೂ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುವುದಿಲ್ಲ. ತತ್ಪರಿಣಾಮವಾಗಿ ಕಾಮಗಾರಿಯನ್ನು ಭೂ ಸೇನಾ ನಿಗಮಕ್ಕೆ ವಹಿಸಿಕೊಟ್ಟು ಕಾಮಗಾರಿ ಪ್ರಾರಂಭಿಸಲಾಗಿರುವುದಿಲ್ಲ.

ಆ) ಈ ಯೋಜನೆಗೆ ಜಿಲ್ಲಾ ಪಂಚಾಯತ್ ವತಿಯಿಂದ ಈಗಾಗಲೇ ರೂ. 10.00 ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು, ಜಮೀನು ಅತಿಕ್ರಮಣವನ್ನು ತೆರವುಗೊಳಿಸಿದ ಕೂಡಲೇ ತೀವ್ರಗತಿಯಲ್ಲಿ ಕ್ರೀಡಾಂಗಣ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಕಲ್ಕಲಾದಿಂದ ಗಿಣಿಗೇರದವರೆಗೆ ಇರುವ ರಾಜ್ಯ ಹೆದ್ದಾರಿಯ ದುರಸ್ತಿ.

25(152)

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?